159

ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು

★

ಲೇಖಕರು:
ಶ್ರೀ। ವೈ. ಮಹಾಲಿಂಗ ಭಟ್.

1957.

(ಗೆರಸಪ್ಪೆ, ಭದ್ರಾವತಿ, ತುಂಗಭದ್ರಾ ಜಲಾಶಯ, ಹಂಪಿ.)

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ
ತಾ. 28-10-1957ರ ವರೆಗೆ ಪ್ರಕಟವಾದ ಪುಸ್ತಕಗಳು

೧. ‡ಕೆಪ್ಪಟರಾಯ (ವಿನೋದ ಕಥೆ) ದಿ| ಎಂ ಎನ್. ಕಾಮತ್.
೨. ನಾರೀಶ್ವರರು (ದ್ವಿ. ಮು.) ಏಕಾಂಕ ಪ್ರಹಸನ ಶ್ರೀ| ಕುಡ್ಪಿ ವಾಸುದೇವ ಶೆಣೈ.
೩. ಕಳ್ಳನಿಗೆ ಸಂಭಾವನೆ (ದ್ವಿತೀಯ ಮುದ್ರಣ) ಶ್ರೀ| ಎಲ್. ಎಸ್. ನಾಯಕ.
೪. ‡ಸದ್ರಿ ಸುಬ್ಬ (ಏಕಾಂಕ ಪ್ರಹಸನ) ದಿ| ಎಂ. ಎನ್ ಕಾಮತ್.
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ) ವೈದ್ಯಗುರು ಎಂ. ಆರ್. ಭಟ್.
೬. ‡ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ) ಕುಡ್ಪಿ ವಾಸುದೇವ ಶೆಣೈ.
೭. ‡'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು) ದಿ| ಎಂ.ಎನ್.
೮. ‡ಇಂಗ್ಲಿಷ್–ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ) [ಕಾಮತ್.
೯. ಲಂಚಕ್ಕೆ ಸಂಚಕಾರ (ದ್ವಿತೀಯ ಮುದ್ರಣ) ಡಾ| ಎಸ್. ಪಿ. ಭಟ್.
೧೦. ಟಿಶ್ಯೂ ಔಷಧಿಗಳ ಕೈಪಿಡಿ(ದ್ವಿ. ಮುದ್ರಣ) ಶ್ರೀ| ಪಿ. ಎಸ್. ವೆಂಕಟಕೃಷ್ಣರಾವ್.
೧೧. ⓐಕ್ಷೇತ್ರ ಧರ್ಮಸ್ಥಳ (ಐದನೇ ಮುದ್ರಣ).
೧೨. ಜೀವದ ಮೌಲ್ಯ (ದ್ವಿತೀಯ ಮುದ್ರಣ) ಶ್ರೀ| ಎಲ್. ಎಸ್. ನಾಯಕ.
೧೩. ‡ಸತ್ತವನ ಸೇಡು ಮತ್ತು ಇತರ ಕಥೆಗಳು ಡಾ| ವಿ. ಆರ್. ಭಟ್.
೧೪. ‡"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ದ್ವಿ. ಮು.)ಏಕಾಂಕ ಪ್ರಹಸನ ಶ್ರೀ| ಕುಡ್ಪಿ ವಾಸುದೇವ ಶೆಣೈ.
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ) ದಿ| ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭. ಒಗಟುಗಳು (ದ್ವಿತೀಯ ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೧೮. ಜಗಳಗಂಟಿ ಮತ್ತು ಇತರ ಕಥೆಗಳು (ದ್ವಿ.ಮು.) ವೈದ್ಯಗುರು ಎಂ. ಆರ್. ಭಟ್.
೧೯. ರಥೋತ್ಸವ.
೨೦. ‡ಕರಿನಾಯಿ ಮತ್ತು ಮುಪ್ಪು ದಿ| ಎಂ. ಎನ್. ಕಾಮತ್.
೨೧. ಭಾರತದ ಮಹಾನಗರಗಳು (ದ್ವಿ. ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ) ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು(ದ್ವಿ.ಮು.) ಶ್ರೀ| ಬಿ. ಶಂಕರ ಭಟ್.
೨೪. ಭಾರತದ ಮಹಾನಗರಗಳು (ದ್ವಿತೀಯ ಮುದ್ರಣ) ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೫. ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು ಶ್ರೀ| ಎಲ್. ಎಸ್. ನಾಯಕ.
೨೬. ಮಾರಾವತಾರ (ದ್ವಿತೀಯ ಮುದ್ರಣ) ಶ್ರೀ| ಜಿ.ಆರ್.ಪಾಂಡೇಶ್ವರ.
೨೭. ಹಾಸವಿಲಾಸ [ದ್ವಿ.ಮು.] ಶ್ರೀ| ಕುಡ್ಪಿ ವಾಸುದೇವ ಶೆಣೈ.
೨೮. ಸತ್ಯವಂತ ಬಾಬಿ [ದ್ವಿ. ಮು.] ಏಕಾಂಕ ಪ್ರಹಸನ ಶ್ರೀ| ಕುಡ್ಪಿ ವಾಸುದೇವ ಶೆಣೈ.
೨೯. ಜಾಣ್ಮೆಯ ಒಗಟುಗಳು ಡಾ| ಎಸ್. ಪಿ. ಭಟ್.
೩೦. ಜಾತಕ ಕಥೆಗಳು [ದ್ವಿ.ಮು.] ಶ್ರೀ| ಎಂ. ಸುಬ್ರಾಯನ್.
೩೧. ಕಾರ್ಕಳದ ಚರಿತ್ರೆ ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೩೨. ಮರ್ಜಿ [ಏಕಾಂಕ ಪ್ರಹಸನ] ದಿ| ಎಂ. ಎನ್. ಕಾಮತ್.

(ಪುಟ 14ಕ್ಕೆ ಮುಂದುವರಿದಿದೆ)

ಸಮಾಜ ಜೀವನದ ದಿವ್ಯ ಸಾಕ್ಷಾತ್ಕಾರಕ್ಕೆ— ಪ್ರವಾಸ ಶಿಕ್ಷಣ ಅಗತ್ಯ.

ಸಮಾಜಜೀವಿತದ ಜೀವಂತ ಒಳಛಾಯೆಯನ್ನು ಆತ್ಮದ ಕಣ್ಣ ಮುಂದೆ ಸುಳಿದಾಡಿಸಿ, ಮನಸ್ಸು-ಹೃದಯಗಳನ್ನು ತನ್ಮಯತೆಯ ಭಾವ ಭಂಗಿಯಲ್ಲಿ ಇರಗೊಳಿಸುವುದು—ಮಾನವಸಂಸ್ಕಾರದ ಹಾದಿಯಲ್ಲಿರಲೇ ಬೇಕಾದ ಮುಖ್ಯ ಲಕ್ಷಣ. ಈ ಕೆಲಸವನ್ನು ಉತ್ತಮ ಸಾಹಿತ್ಯ ತುಸು ಮಟ್ಟಿಗೆ ನಿರ್ವಹಿಸಬಲ್ಲುದಾದರೂ ಪೂರ್ಣತೆಯ ಹಂತಕ್ಕೇರಿಸಲಾರದು. ಸಾಹಿತ್ಯವೆಂದರೆ— ಮನಸ್ಸನ್ನು ಕೆರಳಿಸಬಹುದು. ಆದರೆ, ಹೃದಯವನ್ನು ಅಲುಗಿಸಿ ಮಾನವನ ಒಳದೃಷ್ಟಿಯನ್ನು ತೀಕ್ಷ್ಣತೆಯ ಮೆರುಗಿಗೆ ಒಳಪಡಿಸಿ, ಸಮಾಜಜೀವಿತದಲ್ಲಿ ಸಹಜೀವನದ ತುಂಬು ಮಾಧುರ್ಯವನ್ನು ಹರಡಿ—ಜೀವನದ ದಿವ್ಯ ಸಾಕ್ಷಾತ್ಕಾರವನ್ನು ತಂದೊಡ್ಡುವಂಥ ಹೊಣೆಗಾರಿಕೆ ಸಂಪೂರ್ಣವಾಗಿ ಪ್ರಧಾನ ಶಿಕ್ಷಣದ ಮೇಲೆಯೇ ಇರುತ್ತದೆಂಬುದನ್ನು ಮರೆಯಲಾಗದು. ಈ ತೆರನಾದ ಶೈಕ್ಷಣಿಕ ಪ್ರವಾಸ—ಮಾನವನ ಬಾಳಿನ ಹೊರೆಯನ್ನು ಶಿಥಿಲಗೊಳಿಸಿ, ಅವನಲ್ಲಿ ಸಹನೆ ಹಾಗೂ ಸಂಯಮಗಳ ದೀಪ್ತಿಯನ್ನು ಹೆಚ್ಚುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

ಈ ವರ್ಷದ ಮಂಗಳೂರಿನ ಬಿ. ಟಿ. ಕಾಲೇಜಿನ ಶಿಕ್ಷಕ ವಿದ್ಯಾರ್ಥಿಗಳು ಕಳೆದ (1957) ಸಪ್ಟಂಬರ್ 22ರಿಂದ ಅಕ್ಟೋಬರ್ 1ರ ವರೆಗೆ ಶಿವಮೊಗ್ಗದಲ್ಲಿ ಪ್ರಿನ್ಸಿಪಾಲ್ ಶ್ರೀ। ಒ. ಎಸ್. ಅಂಚನರ ನೇತೃತ್ವದಲ್ಲಿ ತಮ್ಮ ಪೌರತನ ಶಿಕ್ಷಣಶಿಬಿರವನ್ನು ಜರಗಿಸಿದರು. ಅಲ್ಲದೆ, ಗೆರಸಪ್ಪೆ ಜಲಪಾತ, ವಿದ್ಯುಚ್ಛಕ್ತಿ ತಯಾರು ಕೇಂದ್ರ, ಭದ್ರಾವತಿ ಔದ್ಯೋಗಿಕ ಕೇಂದ್ರ, ತುಂಗಭದ್ರ ಜಲಾಶಯ, ಹಂಪಿಯ ಐತಿಹಾಸಿಕ ಮಹತ್ವಪೂರ್ಣ ಅವಶೇಷ ಪ್ರದೇಶ—ಮುಂತಾದ ಕಡೆಗಳಿಗೆ ಪ್ರವಾಸವನ್ನು ಕೈಗೊಂಡು ವಿಶೇಷ ಅನುಭವಗಳನ್ನು ದೊರಕಿಸಿಕೊಂಡರು. ಪ್ರವಾಸತಂಡದಲ್ಲಿ ನಾನು ಕೂಡ ಒಬ್ಬನಾಗಿದ್ದು—ನಾನು ನೋಡಿ. ಕೇಳಿ, ಹಾಗೂ ವಿಮರ್ಶಾತ್ಮಕವಾಗಿ ತಿಳಿದುಕೊಂಡ ಅನುಭವ ವಿಚಾರಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲು ಪ್ರಯತ್ನಿಸಿದ್ದೇನೆ. —ಲೇಖಕ.

ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು

....

ಗೆರಸಪ್ಪೆ ಜಲಪಾತ—ವಿದ್ಯುಚ್ಛಕ್ತಿ ಕೇಂದ್ರ

ಪ್ರಕೃತಿಸೌಂದರ್ಯದಲ್ಲಿ ಭವ್ಯ ರಮಣೀಯತೆಯ ಪ್ರಶಾಂತ ಗಾಂಭೀರ್ಯತೆಯನ್ನು ಎತ್ತಿಹಿಡಿದ ಧಾರಾಶಕ್ತಿ—ಗೆರಸಪ್ಪೆ ಜಲಪಾತ! ಇಷ್ಟರವರೆಗೆ ಮಲೆನಾಡ ಸೀಮೆಯ ಹರಗು ಬಯಲಿನ ಮುಳ್ಳುಗಂಟುಗಳೆಡೆಯಲ್ಲಿ ಹರಿದುಬಂದ ಶರಾವತಿ ನದಿ ಇಲ್ಲಿ ಒಮ್ಮಿಂದೊಮ್ಮೆಲೆ ಸುಮಾರು 842 ಅಡಿಗಳಷ್ಟು ಕೆಳಕ್ಕೆ ಧುಮುಕಿ—ರುದ್ರಗಾಂಭೀರ್ಯದಲ್ಲಿ ಮಧುರ ನಾದವನ್ನು ಹೊಮ್ಮಿಸುತ್ತಡೆ.

ಜಲಪಾತ ಮುಖ್ಯವಾಗಿ ನಾಲ್ಕು ವಿಭಾಗಗಳಾಗಿ ಕೆಳಕ್ಕೆ ಭೋರ್ಗರೆಯುತ್ತಿದೆ. ಇವುಗಳನ್ನು—ರಾಜ, ರಾಣಿ, ರೋರರ್ ಮತ್ತು ರಾಕೆಟ್ ಎಂದು ಕರೆಯಲಾಗುತ್ತದೆ. ಪ್ರವಾಹ—ನೊರೆನೊರೆಯಾಗಿ, ಸುರುಳಿಸುರುಳಿಯಾಗಿ ಪ್ರಪಾತಕ್ಕೆ ಇಳಿಯುತ್ತಿರುವಷ್ಟರಲ್ಲಿ ಸುತ್ತಲಿನ ವಾತಾವರಣವೆಲ್ಲವೂ ತೇವಯುಕ್ತ ಹನಿಗಳಿಂದ ಆವೃತವಾಗುತ್ತದೆ. ಮಳೆಗಾಲದಲ್ಲಿ, ಅಥವಾ ಮೋಡಕವಿದಿರುವ ಸಮಯಗಳಲ್ಲಿ ಜಲಪಾತದ ಪ್ರವಾಹಧಾರೆಗಳು ಮುಸುಕಿಹೋಗುವುದರಿಂದ ಸೌಂದರ್ಯವನ್ನು ಸವಿಯಲು ಸಾಧ್ಯವಾಗದು. ನಾನು ಹೋದ ಈ ಸಂದರ್ಭದಲ್ಲಿ ವಾತಾವರಣ ಶುಭ್ರವಿದ್ದು ಯಾವುದೊಂದೂ ಅಡಚಣೆಯುಂಟಾಗಲಿಲ್ಲ.

ಜಲಪಾತವನ್ನು ನೋಡುವಾಗ, ಅದರ ಪ್ರವಾಹಶಕ್ತಿಯ ಹಿನ್ನೆಲೆಯಲ್ಲಿರುವ ಅವ್ಯಕ್ತ ಹಾಗೂ ಅವರ್ಣನೀಯ ಶಕ್ತಿಸ್ಪಂದನವನ್ನು ಹೃದಯಕ್ಕೆ ತಂದುಕೊಳ್ಳುವಾಗ—ನಾವು ಯಾವ ಪ್ರಪಂಚದಲ್ಲಿದ್ದೇವೆಂದು ಹೇಳುವುದೇ ಕಷ್ಟ. ಇದನ್ನು ನೋಡುತ್ತಿದ್ದಂತೆ ನಮ್ಮ ಮನಸ್ಸು—ಅಲೆಅಲೆಯಾಗಿ ನೆಗೆದೆದ್ದು, ಥಳಥಳಿಯಾಗಿ ಕುಣಿದೆದ್ದು ಕಲ್ಪನಾತೀತ ರಾಜ್ಯದಲ್ಲಿ ಭಾವನಾಮಯ ಗೋಪುರಗಳನ್ನು ಕಟ್ಟುತ್ತದೆ. ಬಾಳ ಸೆಣಸಾಟದಿಂದ ತೇದಿಹೋದ, ಸಂಸಾರ ತಾಪತ್ರಯಗಳಿಂದ ಕಮರಿಹೋದ ನಮ್ಮ ಚೈತನ್ಯಶಕ್ತಿ ಇದರ ಅವಲೋಕನ ಮಾತ್ರದಿಂದಲೇ ನಿಮಿರೆದ್ದು ಸಮಾಜದ

ಯಾವತ್ತೂ ಶೃಂಖಲೆಗಳಿಂದ ಅತೀತವಾಗಿ ನಮ್ಮ ಹೃದಯಗಳನ್ನು ಜಗಜ್ಜೀವನದಲ್ಲಿ ಐಕ್ಯಪಡಿಸಲು ಸೂಕ್ತವಾಗುತ್ತದೆ.

ಜಲಪಾತದ ಎದುರುಭಾಗದ ಪ್ರವಾಸಿ ಮಂದಿರದಿಂದ ತುಸು ದೂರ ಹೋದೊಡನೆ—ವಿದ್ಯುಚ್ಛಕ್ತಿ ಉತ್ಪಾದಿಸುವ ಕಾಮಗಾರಿಗಳ ದೃಶ್ಯವನ್ನು ಸವಿಯಬಹುದು. ಅಂದರೆ—ಇಲ್ಲಿ ವಾಣಿವಿಲಾಸ ಮತ್ತು ಲಕ್ಷ್ಮೀವಿಲಾಸ ಪ್ಲಾಟ್‌ಫಾರ್ಮ್‌ಗಳು ಹಾಯಾಗಿ ಪವಡಿಸಿರುತ್ತವೆ. ಇಲ್ಲಿ ಕುಳಿತುಕೊಂಡು ವಿದ್ಯುಚ್ಛಕ್ತಿ ತಯಾರು ಕೇಂದ್ರದ ವಿಹಂಗಮ ನೋಟವನ್ನು ಮನದಣಿಯೆ ಸವಿಯಬಹುದು.

ಇನ್ನು ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ವಿಷಯವೊಂದಿದೆ. ಅಂದರೆ—ಜಲಪಾತದ ಧಾರೆಗಳಿಗೇ ತಿರುಗಿ-ಚಕ್ರಗಳನ್ನು ಇಟ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲಾಗುತ್ತವೆಂಬ ಕಲ್ಪನೆ ಹೆಚ್ಚಿನವರಲ್ಲಿದೆ. ಇದು ಸರಿಯಲ್ಲ. ವಿದ್ಯುಚ್ಛಕ್ತಿ ತಯಾರಾಗುವುದು ಜಲಪಾತವಾಗುವ ನಿರ್ದಿಷ್ಟ ಸ್ಥಳದಲ್ಲಿ ಅಲ್ಲ. ಅದು ಸುಮಾರು ಎರಡು ಮೈಲುಗಳಷ್ಟು ದೂರದಲ್ಲಾಗಿರುತ್ತದೆ. ಶರಾವತಿ ನದಿಗೆ ಜಲಪಾತದಿಂದ ಸುಮಾರು ಮೂರು ಮೈಲುಗಳಷ್ಟು ದೂರದಲ್ಲಿ ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್—ಎಂಬ ಜಲಾಶಯವನ್ನು ನಿರ್ಮಿಸಿರುತ್ತಾರೆ. ಇಲ್ಲಿಂದ ಒಂದು ಕಾಲುವೆಯ ಮುಖಾಂತರ ನೀರನ್ನು ಕೊಂಡೊಯ್ದು ಜಲಪಾತ ಸ್ಥಳದಿಂದ ಸುಮಾರು ಎರಡು ಮೈಲುಗಳಷ್ಟು ಕೆಳಗೆ ದೊಡ್ಡ ನಳಿಗೆಗಳ ಮೂಲಕ ಕಡಿದಾದ ಗುಡ್ಡದ ಕೆಳಗೆ ಹರಿಯಬಿಡುತ್ತಾರೆ. ಪ್ರಾರಂಭದಲ್ಲಿ ನಾಲ್ಕು ಬೃಹತ್ ಕೊಳವೆಗಳ ಮೂಲಕ ನೀರು ಧುಮುಕುತ್ತದೆ. ಸುಮಾರು ಮಧ್ಯಭಾಗಕ್ಕಾಗುವಾಗ ಈ ನಾಲ್ಕು ಕೊಳವೆಗಳ ನೀರನ್ನು 8 ನಳಿಗೆಗಳ ಮೂಲಕ ಹರಿಸಲಾಗುತ್ತದೆ. ವಿದ್ಯುಚ್ಛಕ್ತಿಯ ತಯಾರು-ಮನೆಯಿರುವುದು ಸುಮಾರು 936 ಅಡಿಗಳಷ್ಟು ಇಂತಿರುವ ಅಳದಲ್ಲಿ! ಇಷ್ಟೊಂದು ದೀರ್ಘ ಇಳಿನೆಲದಲ್ಲಿಯ ತಯಾರು ಕೇಂದ್ರಕ್ಕೆ 8 ಕೊಳವೆಗಳ ಮೂಲಕ ನೀರು ಅತಿ ರಭಸದಿಂದ ಹಾಯ್ದು ಬರುತ್ತದೆ. ಶಕ್ತಿ-ನಿರ್ಮಾಪಕ ಮನೆಯೊಳಗೆ ಪ್ರಸ್ತುತ 8 ಜನರೇಟರುಗಳು ಇವೆ. ಇವುಗಳ ಸಂಖ್ಯೆಯನ್ನು 9ಕ್ಕೇರಿಸಲು ತಕ್ಕ ಸಿದ್ಧತೆಗಳು ಇದೀಗ ನಡೆಯುತ್ತಿವೆ. ಇಲ್ಲಿಯ ಇಂಥ ಪ್ರಪಾತಕ್ಕೆ ಮೇಲಿನಿಂದ ವಿದ್ಯುಚ್ಛಕ್ತಿಯ ಉರುಳುಗಾಡಿಯಲ್ಲಿ (Trolly) ಇಳಿಜಾರಾಗಿ

ಪಟ್ಟಿಗಳ ಮೇಲೆ 1626 ಅಡಿಗಳಷ್ಟು ಇಳಿಯಬೇಕು. ಈ ಗಾಡಿಯಲ್ಲಿ ಒಮ್ಮೆಗೆ ಸುಮಾರು 35 ಜನರಿಗೆ ಪ್ರಯಾಣ ಬೆಳೆಸಬಹುದಾಗಿದೆ. ಒಂದು ಗಾಡಿ ಕೆಳಕ್ಕೆ ಹೋಗುವಾಗ, ಪಕ್ಕದಲ್ಲಿ ಒತ್ತಾಗಿ ಇನ್ನೊಂದು ಗಾಡಿ ಮೇಲಕ್ಕೇರುತ್ತದೆ. ಅಂತೂ—ಒಮ್ಮೆಗೆ ಕೆಳಕ್ಕೆ ಇಳಿಯಲು 5 ನಿಮಿಷಗಳಷ್ಟು ಸಮಯ ಬೇಕಾಗುತ್ತದೆ. ಒಮ್ಮೆಗೆ ಇದರ ಚಾರ್ಜು ಅಣೆ 2 ತೆರಬೇಕು. ಗಾಡಿಯಲ್ಲಿ ಕುಳಿತು ಸಾಗುವುದೆಂದರೆ, ನಾವು ನಮ್ಮನ್ನು ಮಾತ್ರ ಮರೆಯುವುದಲ್ಲದೆ, ಸಮಗ್ರ ಪ್ರಪಂಚವನ್ನೇ ಮರೆತು ಅವ್ಯಕ್ತ ಭಾವನಾ ಲೋಕದಲ್ಲಿ ಕಲ್ಪನಾಸೀಮಾರೇಖೆಯನ್ನು ಗುರುತಿಸಲು ಮೊದಲಾಗುತ್ತೇವೆ. ಎಂಥ ಸುಂದರ ದೃಶ್ಯವದು! ಎಂಥ ನಿತ್ಯನೂತನ ಭಾವನಾಕಲ್ಪನೆಯದು! ಮಾನವನು ಪ್ರಕೃತಿಯನ್ನು ಗೆದ್ದನು—ಎನ್ನುತ್ತೇವೆ. ಇಲ್ಲಿಯ ದೃಶ್ಯವನ್ನು ನೋಡುವಾಗ, ಸೃಷ್ಟಿರಚನೆಯ ಬೆಡಗನ್ನು ಸವಿಯುವಾಗ, ಮಾನವನು ಪ್ರಕೃತಿಯನ್ನು ಗೆದ್ದನೇ, ಅಥವಾ ಪ್ರಕೃತಿಯು ಮಾನವನನ್ನು ಗೆದ್ದಿತೇ? ಎಂಬ ಸಂಶಯದ ತುಮುಲಕ್ಕೆ ನಾವು ಬಲಿಬೀಳುವಂತಾಗುತ್ತೇವೆ!

ಭದ್ರಾವತಿ-ಔದ್ಯೋಗಿಕ ಕೇಂದ್ರ

ಶಿವಮೊಗ್ಗದಿಂದ ಸುಮಾರು 10 ಮೈಲು ದೂರದಲ್ಲಿ ಕಬ್ಬಿಣದ ಅವ್ಯಾಹತ ತಯಾರಿಯಿಂದ ಕನ್ನಾಡಿನ ಹಾಗೂ ಭಾರತದ "ಭದ್ರಾವತಿ" ಯೇ ಆಗಿದೆ. ಮೊದಲು ಇದರ ಹೆಸರು "ಬೆಂಕಿ ಹೊಳೆ"ಯೆಂದಾಗಿತ್ತೆಂದು ಇಲ್ಲಿಯವರು ಹೇಳುತ್ತಾರೆ.

"ಮೈಸೂರು ಅಯರ್ನ್ ಅಂಡ್ ಸ್ಟೀಲ್ ವರ್ಕ್ಸ್" ಎಂಬ ಹೆಸರಿನಲ್ಲಿ ಈ ಉದ್ದಿಮೆಯು ಮೈಸೂರು ಸರಕಾರದ ವತಿಯಿಂದ ಪ್ರಪ್ರಥಮವಾಗಿ 1923ರಲ್ಲಿ ಅಸ್ತಿತ್ವಕ್ಕೆ ಬಂತು. ಪ್ರಾರಂಭದೆಸೆಯಲ್ಲಿ ಮರದ ಮಸಿಯಿಂದ ಅದುರನ್ನು ಕರಗಿಸಲಾಗುತ್ತಿತ್ತು. ಇದರ ಪ್ರಮಾಣವು ಆಗ ದಿವಸಕ್ಕೆ 60 ಟನ್ನುಗಳಷ್ಟು ಬೀಳಲು ಕಬ್ಬಿಣ (Pig Iron) ಆಗಿತ್ತು. ಹೀಗೆ ದಿನದಿಂದ ದಿನಕ್ಕೆ ಉದ್ದಿಮೆಯು ಕ್ರಮಬದ್ಧವಾಗಿ ಬಡಾವಣೆಗೊಳ್ಳುತ್ತ, ಇದೀಗ ಅತ್ಯಾಧುನಿಕ ರೀತಿಯಲ್ಲಿ ಬೆಳೆದುಬಂದು, ಮೈಸೂರು ರಾಜ್ಯದಲ್ಲಷ್ಟೇ ಮಾತ್ರವಲ್ಲ, ಭಾರತದ ಆರ್ಥಿಕ ಕ್ಷೇತ್ರದಲ್ಲಿ ಗಣ್ಯವಾದ ಒಂದು ಸ್ಥಾನವನ್ನು ದೊರಕಿಸಿಕೊಂಡಿದೆ.

ಅದುರನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಕರಗಿಸುವ ವಿಧಾನವನ್ನು ಪ್ರಪ್ರಥಮವಾಗಿ ಅಳವಡಿಸಿಕೊಂಡು, ಭಾರತದ ಔದ್ಯೋಗಿಕ ಇತಿಹಾಸದಲ್ಲೊಂದು ಮೈಲುಗಲ್ಲನ್ನು ಸ್ಥಾಪಿಸಿದ ಗೌರವವು ಭದ್ರಾವತಿಗೇ ಸಲ್ಲಬೇಕು. 1952ನೇ ಅಕ್ಟೋಬರ್‌ನಲ್ಲಿ ಬೀಳಲು ಕಬ್ಬಿಣದ ವಿದ್ಯುಚ್ಛಕ್ತಿ ಕುಲುಮೆ (Furnace)ಯು ತನ್ನ ಕಾರ್ಯಾರಂಭಕ್ಕೆ ತೊಡಗಿತು.

ಪ್ರಮುಖ ತಯಾರಿಗಳು

ಕಾರ್ಖಾನೆಯ ಪ್ರಮುಖ ತಯಾರಿಗಳೆಂದರೆ—ಸ್ಟೀಲ್ ಸೆಕ್ಷನುಗಳು, ಸ್ಟೀಲ್ ಕಾಸ್ಟಿಂಗ್ಸ್, ಕಾಸ್ಟ್ ಅಯರ್ನ್ ಪೈಪುಗಳು, ರೈಲ್ವೆಗಳಿಗಾಗಿ ಕಾಸ್ಟ್ ಅಯರ್ನ್ ಸ್ಲೀಪರುಗಳು, ಕಾಸ್ಟ್ ಅಯರ್ನಿನ ಇತರ ಸಾಧನಗಳು, ಬೀಳಲು ಕಬ್ಬಿಣ, ಸ್ಟ್ರಕ್ಚರಲ್ ಫೇಬ್ರಿಕೇಶನುಗಳು, ಬಾಲಿಂಗ್ ಹೂಪುಗಳು, ಫೆರೋ ಸಿಲಿಕನ್, (ಭಾರತದಲ್ಲಿ ಇದು ದೊರಕುವುದು ಇಲ್ಲಿ ಮಾತ್ರ) ಗ್ಲೇಸಿಯಲ್ ಮತ್ತು ಟೆಕ್ನಿಕಲ್ ಎಸೆಟಿಕ್ ಏಸಿಡ್ ಮತ್ತು ಸಿಮೆಂಟ್.

ಇವುಗಳ ಪ್ರಧಾನ ಮಾರುಕಟ್ಟೆಗಳೆಂದರೆ—ಮದ್ರಾಸು, ಮುಂಬಯಿ, ನವಮೈಸೂರು ಮತ್ತು ಆಂಧ್ರಪ್ರದೇಶ.

ಅದುರು ಎಲ್ಲಿಂದ?

ಕಾರ್ಖಾನೆಗೆ ಬೇಕಾದ ಕಬ್ಬಿಣದ ಅದುರು ಇಲ್ಲಿಂದ ಸುಮಾರು 36 ಮೈಲು ದೂರದ ಕೆಮ್ಮಣ್ಣುಗುಂಡಿ ಗನಿಗಳಿಂದ ಬರುತ್ತದೆ. ಬಾಬಾಬುಡನ್ ಗುಡ್ಡಗಳ ತುದಿಯಲ್ಲಿರುವ ಈ ಗನಿಗಳು ಸಮುದ್ರಮಟ್ಟದಿಂದ 5,000 ಅಡಿಗಳಷ್ಟು ಎತ್ತರದಲ್ಲಿವೆ.

ಪ್ರಸ್ತುತ—ಮೂರು ಅದುರು ತುಂಬುವ ಪ್ರದೇಶಗಳಿಂದ ನೆಲವನ್ನು ಶೋಧಿಸಲಾಗುತ್ತಿದೆ. ಇವುಗಳ ವಿಸ್ತಾರ ಸುಮಾರು 4 ಚದರಮೈಲುಗಳಷ್ಟಾಗಬಹುದು. ಇಲ್ಲಿ ಹೆಮಟೈಟ್ ಮತ್ತು ಲಿಮೊನೈಟ್‌ಗಳೆಂಬ ಎರಡು ಜಾತಿಯ ಅದುರುಗಳು ದೊರಕುತ್ತವೆ. ಈ ರೀತಿ ಅದುರುಗಳನ್ನು ಹೊರತೆಗೆದ ನಂತರ, ಅವುಗಳನ್ನು ಜಾಗ್ರತೆಯಿಂದ ವರ್ಗೀಕರಿಸಿ ಸಾಧಾರಣ ಶೇಕಡ 54ರಷ್ಟು ಕಬ್ಬಿಣದ ಅಂಶಗಳಷ್ಟು ದೊರಕುವಂತೆ ಪ್ರತ್ಯೇಕಿಸಲಾಗುತ್ತದೆ. ಬೆಟ್ಟದ ತಳಭಾಗದಲ್ಲಿ ಅತ್ಯಲ್ಪ ಪ್ರಮಾಣದ ಸಿಲೀಸಿಯಸ್

ಅದುರು ಸಿಗುತ್ತದೆ. ಇದರಲ್ಲಿ ಕಬ್ಬಿಣವು ಶೇ. 40ರಷ್ಟು ಉಳಿದ ಶೇ. 60 ರಷ್ಟು ಸಿಲಿಕದಿಂದ ಕೂಡಿದುದಾಗಿರುತ್ತದೆ.

ಗಣಿಗಳಿಂದ ಹೊರತೆಗೆದ ಅದುರುಗಳನ್ನು ಟ್ರಾಲಿ ಲೈನುಗಳ ಮೇಲೆ ಟ್ರಕ್‌ಗಳ ಸಹಾಯದಿಂದ ಮೇಲಕ್ಕೆ ತರಲಾಗುವುದು. ಇಲ್ಲಿ ಅವುಗಳನ್ನು ರೋಪ್‌ವೇ (Rope-way)ಯ ಕೇಂದ್ರಸ್ಥಾನದಲ್ಲಿಯ ಬಂಕರ್‌ನಲ್ಲಿ ಜಮಾವಣೆ ಮಾಡಲಾಗುತ್ತದೆ. ಆ ಮೇಲೆ ರೋಪ್-ವೇಯ ಮುಖಾಂತರ ಬಂಕರ್‌ನಲ್ಲಿಯ ಅದುರುಗಳನ್ನು 3 ಮೈಲು ದೂರದ ಬೆಟ್ಟದ ಕೆಳ ಭಾಗದಲ್ಲಿಯ ಟೆಸಿಂಗೆಬಿಲೆಗೆ ಒಯ್ಯಲಾಗುತ್ತದೆ.

ಸುಣ್ಣದ ಕಲ್ಲು

ಕಬ್ಬಿಣ ತಯಾರಿಗೆ ಸುಣ್ಣದ ಕಲ್ಲುಗಳು ಅತಿ ಪ್ರಾಮುಖ್ಯ ಕಚ್ಚಾ ಸಾಧನ. ಬ್ಲಾಸ್ಟ್ ಫರ್‌ನೆಸ್ ಮತ್ತು ಇಲೆಕ್ಟ್ರಿಕ್ ಫರ್‌ನೆಸ್‌ಗಳಲ್ಲಿ ಅದುರುಗಳನ್ನು ಕರಗಿಸಿ ಬೀಳಲು ಕಬ್ಬಿಣವನ್ನಾಗಿ ಮಾರ್ಪಡಿಸುವುದಕ್ಕೆ ಇದು ಇಲ್ಲದೆ ನಿರ್ವಾಹವೇ ಇಲ್ಲ. ಭದ್ರಾವತಿಗೆ ಬೇಕಾದ ಇಂಥ ಕಚ್ಚಾ ಸುಣ್ಣದ ಕಲ್ಲುಗಳನ್ನು ಇಲ್ಲಿಂದ ಸುಮಾರು 24 ಮೈಲು ದೂರದ ಭಟಗುಂಡ್ ಎಂಬಲ್ಲಿಂದ ತರಿಸಲಾಗುತ್ತದೆ.

ಬೆಂಕಿಯ ಹೊಳೆ!

ಬ್ಲಾಸ್ಟ್‌ಫರ್‌ನೆಸ್ ಮತ್ತು ಇಲೆಕ್ಟ್ರಿಕ್ ಫರ್‌ನೆಸ್‌ಗಳಲ್ಲಿ ಬೀಳಲು ಕಬ್ಬಿಣ ಕರಗಿ, ಮಳಲ ದಂಡೆಯ ಮೇಲೆ ಪ್ರವಹಿಸುವ ದೃಶ್ಯವನ್ನಂತೂ ವರ್ಣಿಸಲಳವಲ್ಲ. ಕರಗಿದ ದ್ರವ ಮಳಲಿನ ಮೇಲೆ ಕೊರೆದ ಕಣಿಗಳ ಮೇಲೆ ರಭಸದಿಂದ ಮುನ್ನುಗ್ಗಿ ಬರುತ್ತಿರುವಾಗ ಬೆಂಕಿಯ ಹೊಳೆಯೇ ಹರಿದುಬರುತ್ತದೋ ಎಂದು ಭಾಸವಾಗುತ್ತದೆ. ಮನಸ್ಸು ಮತ್ತು ಕೈಗಳು ಒಂದಾದರೆ, ಭಾವನೆ ಮತ್ತು ಕರ್ಮಗಳು ವಿಲೀನವಾದರೆ– ಈ ಪ್ರಪಂಚದಲ್ಲಿ ಮಾನವನಿಂದ ಆಗದ ಕೆಲಸ ಇನ್ನು ಏನು ಉಳಿಯಿತು? ಇದಕ್ಕಿಂತ ಹೆಚ್ಚಿನ ನಿದರ್ಶನ ಇನ್ನೇನು ಬೇಕಾಗಿದೆ?

ಸಿಮೆಂಟು ಕಾರ್ಖಾನೆ

ಸುಣ್ಣದ ಕಲ್ಲು, ಜೇಡಿಮಣ್ಣು, ಮತ್ತು ಹೊಳೆಮಳಲು— ಇತ್ಯಾದಿ ಸಾಧನಗಳು ತೀರ ಸನಿಹದಲ್ಲಿ ದೊರಕುವಾಗ ಸಿಮೆಂಟು ತಯಾರಿಗಾಗಿ ಅನುಮಾನಿಸುವ ಆವಶ್ಯಕತೆಯೇನಿದೆ? ಪರಿಸ್ಥಿತಿಯನ್ನು ಮನಗಂಡ 'ಮೈಸೂರು ಅಯರ್ನ್ ಅಂಡ್ ಸ್ಟೀಲ್ ವರ್ಕ್ಸ್' 1938ರಲ್ಲಿ ಪೋರ್ಟ್ ಲೇಂಡ್ ಸಿಮೆಂಟನ್ನು ತಯಾರಿಸುವುದಕ್ಕೆ ಪ್ರಾರಂಭಿಸಿತು. ಪ್ರಾರಂಭದಲ್ಲಿ ಈ ಕಾರ್ಖಾನೆಯು ದೈನಂದಿನದ ಉತ್ಪಾದನೆ ಬರಿಯ 60 ಟನ್ನುಗಳಷ್ಟು ಮಾತ್ರ! ಇದು ಕಬ್ಬಿಣ ಕಾರ್ಖಾನೆಗೆ ತೀರ ಸಮೀಪದಲ್ಲಿಯೇ ಇದೆ.

ಸಿಮೆಂಟಿಗಾಗಿ ದಿನೇ ದಿನೇ ಬೇಡಿಕೆಗಳು ಹೆಚ್ಚಾಗಲು ತೊಡಗಿದುದರಿಂದ 1952ರಲ್ಲಿ ಕಾರ್ಖಾನೆಯು ತನ್ನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವಿಸ್ತೃತಗೊಳಿಸಿತು. ಪ್ರಸ್ತುತ— ಇದರ ವಾರ್ಷಿಕಉತ್ಪಾದನೆ ಸುಮಾರು 95 ಸಾವಿರ ಟನ್ನುಗಳಷ್ಟಾಗಿದೆಯೆಂದು ಹೇಳಲಾಗಿದೆ.

ಇಲ್ಲಿಗೆ ಬೇಕಾದ ಇಂಧನವನ್ನು (Fuel) ಬಿಹಾರಿನಿಂದಲೂ ಜಿಪ್ಸಿಯಮ್‌ನ್ನು ತಿರುಚಿನಾಪಳ್ಳಿಯಿಂದಲೂ ತರಿಸಿಕೊಳ್ಳಲಾಗುತ್ತಿದೆ.

ಸ್ಟಾಂಡಾರ್ಡ್ ವೆಟ್ ಪ್ರೊಸೆಸ್ (Standard Wet-Process)ನ ಮೂಲಕ ಸಿಮೆಂಟಿನ ತಯಾರಿಯಾಗುತ್ತಿದೆ.

ಮಜೂರ ವೇತನ

ಕಬ್ಬಿಣ ಮತ್ತು ಸಿಮೆಂಟ್ ಉದ್ದಿಮೆಗಳ ಮಜೂರಸಾಮಾನ್ಯರ ದಿನವಹಿ ವೇತನಮಟ್ಟವು—14 ಆಣೆಯಿಂದ ತೊಡಗಿ ರೂ. 3ರ ವರೆಗಿದ್ದು ತೃಪ್ತಿಕರವಾಗಿಲ್ಲವೆನ್ನದೆ ನಿರ್ವಾಹವಿಲ್ಲ.

ಕಾಗದ ಕಾರ್ಖಾನೆ

ಭದ್ರಾ ನದಿಯ ಕಿನಾರೆಯಲ್ಲಿದೆ. ಮುಖ್ಯವಾಗಿ ಇಲ್ಲಿಗೆ ಬೇಕಾದ ಬಿದಿರುಗಳನ್ನು ಉಂಭಿಬೈಲು, ಜೋಳದಾಳು, ದಾವಣಗೆರೆ ಕಡೆಗಳಿಂದ ತರಿಸಲಾಗುತ್ತದೆ.

ಕಾಗದ ತಯಾರಿಯು ವಿಧಾನವಂತೂ ಬಹಳ ಕುತೂಹಲದಾಯಕವಾದುದು. ಪ್ರಾರಂಭದಲ್ಲಿ--ದೊಡ್ಡ ದೊಡ್ಡ ಬಿದಿರು ಮೋಳೆಗಳನ್ನು "ಚಿಪ್ಪರ್ ಹೌಸ್"ನ ಯಂತ್ರಕ್ಕೆ ಕೊಟ್ಟು ಪುಡಿಮಾಡಲಾಗುವುದು. ಹೀಗೆ ಪುಡಿಗೈದ ಚೂರುಗಳು ದೊಡ್ಡ ಕೊಳವೆಯೊಂದರ ಮೂಲಕ ಹಾದುಹೋಗಿ "ಡೈಜೆಸ್ಟರ್ಸ್"ನಲ್ಲಿ ಒಂದು ಪರಿಪಾಕಹೊಂದುತ್ತದೆ. ಇಲ್ಲಿ ಇದನ್ನು ಸೋಡಿಯಂ ಹೈಡ್ರೋಕ್ಸೈಡ್‌ನ ಸಹಾಯದಿಂದ ಪಲ್ಪ(Pulp)ನ್ನು ಶುದ್ಧಗೊಳಿಸುವುದು. ಇಷ್ಟರಲ್ಲಿ— ಚಿಂದಿ ಬಟ್ಟೆಗಳ ಮತ್ತು ಕಾಗದಚೂರುಗಳ (Waste-papers) ಮೇಲಿನ ರೀತಿಯಲ್ಲೇ ಪರಿಷ್ಕೃತಗೊಂಡ ಪಲ್ಪ್‌ಗಳು ಬಿದಿರು ಪಲ್ಪಿನೊಂದಿಗೆ ಸೇರಿಕೊಳ್ಳುತ್ತವೆ. (ಬರಿಯ ಬಿದಿರು ಪಲ್ಪಿನಿಂದ ತಯಾರಿಸಿದ ಕಾಗದ ಗಟ್ಟಿ ಬರುವುದಿಲ್ಲ. ಆದ್ದರಿಂದ ಈ ರೀತಿಯ ಬೆರಕೆ ಅಗತ್ಯ.) ಇಂತಿರುವ ಮಿಶ್ರ ಪಲ್ಪ್ ಉರುಳುತ್ತಿರುವ ಹರಗು ಬಟ್ಟೆಯ ಮೇಲೆ (Flattening Rollers) ಹರಿದಾಡಿ—ತನ್ನಲ್ಲಿರುವ ನೀರಿನಾಂಶವನ್ನು ಹೊರಕ್ಕೆಸೆದು ಕೊನೆಗೆ ಕಾಗದವಾಗಿ ಸುತ್ತಿಕೊಳ್ಳುತ್ತದೆ. ಬ್ಲಾಟಿಂಗ್ ಪೇಪರ್ ಮಾಡುವಾಗ ಅದಕ್ಕೆ ರೋಸಿನ್(Rosin)ನ್ನು ಸೇರಿಸಲಾಗುವುದಿಲ್ಲ. ಉಳಿದವುಗಳಿಗೆಲ್ಲ ಇದನ್ನು ಬೆರಕೆಹಾಕಲಾಗುವುದು. ಅಂದರೆ, ಇದು ಕಾಗದದೊಳಗಿನ ಕಣಗಳನ್ನು (Fibres) ಭದ್ರವಾಗಿ ಹೊಂದಿಸಿಕೊಳ್ಳುತ್ತದೆ.

ಮಜೂರ ವೇತನ

ಮಜೂರಸಾಮಾನ್ಯರ ದೈನಂದಿನ ವೇತನಮಟ್ಟವು 14 ಆಣೆಗಳಿಂದ ತೊಡಗಿ ರೂ. 2—8—0ರ ವರೆಗಿದೆಯೆಂದು ತಿಳಿದಿದ್ದೇನೆ.

ಭದ್ರಾವತಿಯ ಹೊಸ ನಗರ

ಈ ಔದ್ಯೋಗಿಕ ಹೊಸ ನಗರದ ಒಟ್ಟು ಜನಸಂಖ್ಯೆ ಸುಮಾರು 35 ಸಾವಿರ. ಉದ್ದಿಮೆ ಕ್ಷೇತ್ರದ ಒಟ್ಟು ಸುಮಾರು 5 ಸಾವಿರ ನೌಕರರಲ್ಲಿ ಸುಮಾರು 2 ಸಾವಿರ ಜನರಿಗೆ ವಸತಿ ಗೃಹಗಳನ್ನು ಒದಗಿಸಿಕೊಡಲಾಗಿದೆ. ಸುಮಾರು 2 ಸಾವಿರ ಮಂದಿಗೆ ವಸತಿಗಾಗಿ ಪ್ರತ್ಯೇಕಿಸಲ್ಪಟ್ಟ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶಕೊಡಲಾಗಿದೆ. ವಸತಿ ಗೃಹಗಳು

ಆಧುನಿಕ ಸಲಕರಣೆಗಳಿಂದ ಕೂಡಿದ್ದು—ಇಡೀ ಪ್ರದೇಶಕ್ಕೆ ಭೂಗತಚರಂಡಿ ಪದ್ಧತಿಯನ್ನು ಕಾರ್ಯರೂಪಕ್ಕೆ ತರಲಾಗಿದೆ. ಕಾರ್ಖಾನೆಯು ವಠಾರದ ಆರೋಗ್ಯ, ನೈರ್ಮಲ್ಯಗಳಿಗಾಗಿ ವಾರ್ಷಿಕವಾಗಿ ಸುಮಾರು 60 ಸಾವಿರ ರೂಪಾಯಿಗಳಷ್ಟು ವ್ಯಯಿಸುತ್ತಿದೆಯೆಂದು ಹೇಳಲಾಗಿದೆ.

ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನನಿಗಾಕೊಡಲಾಗುತ್ತಿದೆ. ಸುಮಾರು 30ಕ್ಕೂ ಮಿಕ್ಕಿದ ವಯಸ್ಕ ಶಿಕ್ಷಣ ಕೇಂದ್ರಗಳಿವೆಯೆಂದು ಹೇಳಲಾಗಿದೆ. ಇಲ್ಲಿ—ಕನ್ನಡ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಶಿಕ್ಷಣ ಕೊಡಲಾಗುತ್ತಿದೆ. ವೈದ್ಯಕೀಯ ಸವಲತ್ತುಗಳಿಗಾಗಿ ಒಂದು ಆಸ್ಪತ್ರೆಯನ್ನು ಸಹ ತೆರೆಯಲಾಗಿದೆ.

ತುಂಗಭದ್ರಾ ಜಲಾಶಯ

ಹೊಸಪೇಟೆಯಿಂದ ಸುಮಾರು 3 ಮೈಲುಗಳ ದೂರದಲ್ಲಿದ್ದು ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರದೇಶ. ಇದು ಮೊದಲಿನ ಮದ್ರಾಸು, ಮತ್ತು ಮಾಜಿ-ಹೈದರಾಬಾದ್ ಸರಕಾರಗಳು ಜತೆಯಾಗಿ ಕೈಗೊಂಡ ವಿವಿಧೋದ್ದೇಶ (Multi-purpose Scheme) ಯೋಜನೆ. ಈಗ ಇದರ ಹಕ್ಕು ಬಾಧ್ಯತೆಗಳು ಮೈಸೂರು, ಮತ್ತು ಆಂಧ್ರ ರಾಜ್ಯಗಳಿಗೆ ಬಂದಿರುತ್ತವೆ. ಈ ಜಲಾಶಯಕ್ಕೆ ಖರ್ಚಾದ ಒಟ್ಟು ರೂಪಾಯಿ ಸುಮಾರು 43 ಕೋಟಿಗಳಿಗಿಂತಲೂ ಮಿಕ್ಕಿದೆಯೆನ್ನಲಾಗಿದೆ. ಇಂಥ ಬೃಹತ್ ಜಲಾಶಯವು ಮೈಸೂರು ಮತ್ತು ಆಂಧ್ರ ಪ್ರದೇಶಗಳ ಸುಮಾರು 7 ಲಕ್ಷ ಎಕರೆ ಜಮೀನುಗಳಿಗೆ ನೀರು ಪೂರೈಸುವುದು. ಇದರಲ್ಲಿ ಅಧಿಕಾಂಶವು ಮೈಸೂರು ವಿಭಾಗಕ್ಕೆ ಆಗಿರುತ್ತದೆ. ಅಣೆಕಟ್ಟಿನ ಕೆಳಭಾಗದ ಮೈಸೂರು ಪಾರ್ಶ್ವದಲ್ಲಿ ವಿದ್ಯುಚ್ಛಕ್ತಿಯ ತಯಾರು ಕೇಂದ್ರವಿದೆ. ಇದರಲ್ಲಿ ಸುಮಾರು 30 ಸಾವಿರ ಕಿಲೋವಾಟ್ ಶಕ್ತಿಯನ್ನು ಸಿದ್ಧಗೊಳಿಸಲಾಗುವುದು.

ಅಣೆಕಟ್ಟಿನ ಎಡ ಪಾರ್ಶ್ವದಲ್ಲಿ—ಎತ್ತರವಾದ ಬೆಟ್ಟವೊಂದಿದೆ. ಇದರ ಮೇಲೆ ಅತ್ಯಾಧುನಿಕ ರೀತಿಯ ಬಂಗಲೆಯನ್ನು ನಿರ್ಮಿಸಲಾಗಿದೆ. ವಾಹನಗಳು ಸುರುಳಿ ಸುರುಳಿಯಾಗಿ ಈ ಗುಡ್ಡವನ್ನೇರಬಹುದು. ಗುಡ್ಡದ ಮೇಲೇರಿ ಅಲ್ಲಿರುವ ಉನ್ನತ ಗೋಪುರವೊಂದನ್ನು ಹತ್ತಿದರೆ ಜಲಾಶಯದ ಮತ್ತು ಸುತ್ತಲಿನ ವಿಹಂಗಮ ನೋಟವನ್ನು ಸವಿಯಬಹುದು. ಇಲ್ಲಿಗೆ

"ವೈಕುಂಠ"ವೆಂದು ಹೆಸರು. ಮನುಷ್ಯನಿರ್ಮಿತ ಈ "ವೈಕುಂಠ"— ಯಾವ ರೀತಿಯಲ್ಲೂ ಹಿಂದುಳಿದಿಲ್ಲ. ಇದು ನಿಜವಾದ 'ವೈಕುಂಠ'ವೇ ಆಗಿರುತ್ತದೆ.

ಇಂಥ ವಿವಿಧೋದ್ದೇಶ ಜಲಾಶಯವು ಕಳೆದ 1956ನೇ ಅಕ್ಟೋಬರ್ 2ರಂದು— ಗಾಂಧಿ ಜಯಂತಿಯಂದು ಆಂಧ್ರ ರಾಜ್ಯದ ಆಗಿನ ರಾಜ್ಯಪಾಲ ಶ್ರೀ। ಸಿ. ಎಮ್. ತ್ರಿವೇದಿಯವರಿಂದ ಉದ್ಘಾಟಿಸಲ್ಪಟ್ಟಿತು. ಮೈಸೂರಿನ ಮಾಜಿ-ಮುಖ್ಯ ಮಂತ್ರಿ ಶ್ರೀ। ಕಡಿದಾಳ ಮಂಜಪ್ಪನವರು ಅಂದಿನ ಅಧ್ಯಕ್ಷತೆ ವಹಿಸಿದ್ದರು.

ಜಲಾಶಯದ ಮುಖ್ಯ ಇಂಜಿನಿಯರರು ಶ್ರೀ। ತಿರುಮಲೆ ಅಯ್ಯಂಗಾರರು. ಇವರ ಪ್ರತಿಮೆಯೊಂದು 'ವೈಕುಂಠ'ದ ಕೆಳಗೆ— ಅಣೆಕಟ್ಟಿನ ಎಡ ಪಾರ್ಶ್ವದಲ್ಲಿ ವಿರಾಜಮಾನವಾಗಿದೆ.

ಮಜೂರ ವೇತನ

ಇಲ್ಲಿಯ ಕಲ್ಲು ಕುಟ್ಟಿಗರು ಹೆಚ್ಚಾಗಿ ಕೊಯಮುತ್ತೂರು ಕಡೆಯ ತಮಿಳರು. ಇವರ ದೈನಂದಿನ ವೇತನ ರೂ. 2ರಿಂದ ರೂ. 3 – 8 – 0ರ ವರೆಗಿದೆ. ಕಲ್ಲು ಕಟ್ಟುವವರ ವೇತನ ರೂ. 4 – 8 – 0 ಉಂಟು ಎಂದು ನನ್ನ ತಿಳುವಳಿಕೆಗೆ ಬಂದಿದೆ. ಕಲ್ಲಿನ ಕೆಲಸ ಇನ್ನೂ ಮುಂದುವರಿಯುತ್ತಿದೆ.

ಭಾವರಸದ ಬ್ರಹ್ಮಗಿರಿ—ಹಂಪಿ

ಶ್ರೀಮತ್ಕರ್ಣಾಟಕ ರಾಜ್ಯ ರಮಾರಮಣ ಕೃಷ್ಣದೇವರಾಯನ ವರಾಹ ಚಿಹ್ನಾಂಕಿತ ವಿಜಯಧ್ವಜದ ಹೊಸಹಗಲಲ್ಲಿ ಬೆಳೆದು ನಿಂತ ಭವ್ಯ ವಿನೂತನ ನಗರ–ಹಂಪಿ! ಗುಪ್ತಪಾರಮಾರ್ಥಿಕ ವಿಚಾರಗಳಿಗೆ ಆಧ್ಯಾತ್ಮಿಕದ ನವ್ಯಚೈತನ್ಯವನ್ನು ತೂರಿ ಕನ್ನಡಿಗರಲ್ಲಿ ಕರ್ಮನಿಷ್ಠೆಯನ್ನು ಬೆಳಗಿದ ವಿರೂಪಾಕ್ಷನ ದಿವ್ಯಸಾನ್ನಿಧ್ಯ–ಹಂಪಿ!! ಕೊನೆಗೆ–ಅಳಿಯ ರಾಮರಾಜನ ಕುಟಿಲ ರಾಜಕಾರಣದಿಂದ 1565ರ ತಾಳಿಕೋಟೆ ಕದನದಲ್ಲಿ ಧ್ವಂಸವಾಗಿ ಕೊಂಪೆಯಾದ ಈ ಹಂಪಿ–ಇದೀಗ 'ಹಾಳು ಹಂಪಿ'ಯಾಗಿ ಪರಿಣಮಿಸಿದೆ!!!

ಹಂಪಿ ಇಂದು ಹಾಳು ಕೊಂಪೆಯಾದರೂ—ಕೊಂಪೆಯಲ್ಲಿಯೂ ತನ್ನ ಶ್ರೇಷ್ಠತೆಯನ್ನು ಎತ್ತಿ ಸಾರುತ್ತಿದೆ.

ಹಂಪಿಯನ್ನು ನೋಡಿದರೆ ಒಮ್ಮೆ ಕಣ್ಣೀರಕೋಡಿ ಹರಿಯುತ್ತದೆ—ಇಂಥ ಐತಿಹ್ಯಪೂರ್ಣಸ್ಥಳ ಹಾಳಾಯಿತಲ್ಲಾ ಎಂದು! ಇನ್ನೊಮ್ಮೆ ಕ್ರೋಧ ಮುಮ್ಮಳಿಸಿ ಮೈಕಾವೇರಿ ಕೈಗಳು ಮೇಲೇರುತ್ತವೆ—ನಾವು ಕೂಡ ತಾಳಿ ಕೋಟೆ ಕದನದಲ್ಲಿ ಯೋಧರಾಗಿ ವೀರಾವೇಶದಿಂದ ವೈರಿಗಳನ್ನು ಸದೆಬಡಿಯ ಬೇಕಿತ್ತೆಂದು!!

ಇಂಥ ಹಂಪಿಯು ಹೊಸಪೇಟೆಯಿಂದ 8 ಮೈಲು ದೂರದಲ್ಲಿದೆ. ಇಲ್ಲಿಗೆ ಹೋಗುವ ಭೂವಲಯ ಮತ್ತು ಇನ್ನಿತರ ಸನ್ನಿವೇಶಗಳು ಹಳೆ ದೆಹಲಿಯ ವಠಾರವನ್ನು ನೆನಪಿಗೆ ತಂದುಕೊಡುತ್ತವೆ.

ಪ್ರೇಕ್ಷಣೀಯ ಸ್ಥಳಗಳು

ಹೊಸಪೇಟೆಯಿಂದ 6 ಮೈಲು ದೂರದಲ್ಲಿ ಸುಮಾರು 3 ಸಾವಿರ ಅಡಿ ಎತ್ತರದ ಬೆಟ್ಟದ ಮೇಲೆ ಜಂಬುನಾಥ ದೇವಾಲಯವು ಕಂಗೊಳಿಸು ತ್ತಿದೆ. ಇಲ್ಲಿಂದ 1 ಮೈಲು ದೂರದಲ್ಲಿ ಅನಂತಶಯನನ ದೇವಸ್ಥಾನ ಸಿಗು ತ್ತದೆ. ಗುಮ್ಮಟಾಕಾರದ ವಿಮಾನವುಳ್ಳ ಮಾಳಿಗೆಯೊಂದು ಇದರ ಗರ್ಭ ಗುಡಿಯ ಮೇಲಿದೆ. ಇಲ್ಲಿಯ ಕಲಾನೈಪುಣ್ಯತೆ ದಿಗ್ಭ್ರಮೆ ಹುಟ್ಟಿಸುವಂತ ಹುದು. ಇದರ ಒಳಗೆ ವಿಗ್ರಹವು ಕಾಣಿಸುವುದಿಲ್ಲ. ಇಲ್ಲಿಂದ ಒಂದು ಮೈಲು ದೂರದಲ್ಲಿ ಸೂಳೆಯಬಾವಿಯಿದೆ. ಇದು ಉತ್ತಮ ಸ್ಥಿತಿಯ ಮೆಟ್ಟಲುಗಳಿಂದ ಕೂಡಿದುದು. ಇನ್ನು ಸ್ವಲ್ಪ ದೂರದಲ್ಲಿ ಮಲ್ಲಪ್ಪನ ಗುಡಿ ಯನ್ನು ಕಾಣಬಹುದು. ಈ ವಠಾರದಲ್ಲಿ ಹಿಂದಿನ ಕಾಲದ ರಾಜಬೀದಿಗಳ ಕುರುಹುಗಳು ಯಥೇಷ್ಟವಾಗಿವೆ. ಇಲ್ಲಿ ಎರಡು ಬೀದಿಯ ಮುಖ್ಯದ್ವಾರ ಗಳಿದ್ದು—ಹಿಂದೆ ಇಲ್ಲಿ ಪಹರೆಯವರು ಇರುತ್ತಿದ್ದರಂತೆ.

ಮುಂದೆ ಹೇಮಕೂಟ. ಇಲ್ಲಿ ಕೃಷ್ಣ, ವಿಷ್ಣು, ಸಾಸಿವೆಕಾಳು ಮತ್ತು ಕಡಲೆಕಾಯಿ ಗಣಪತಿ–ಈ ಬೃಹತ್ ವಿಗ್ರಹಗಳನ್ನು ಕಾಣಬಹುದು. ವಿಗ್ರಹ ಗಳನ್ನು ಅವುಗಳ ಶಬ್ದಾರ್ಥದಿಂದ ಅರ್ಥಮಾಡುವುದು ತಪ್ಪಾಗುವುದು. ವ್ಯಂಗ್ಯವಾಗಿ ಕರೆಯುವುದು ರೂಢಿ, ಅಷ್ಟೆ!

ವಿರೂಪಾಕ್ಷ

ತುಂಗಭದ್ರಾ ನದಿ ಕಿನಾರೆಯಲ್ಲಿ ವಿಜಯನಗರ ರಾಜರ ಅಧಿದೇವತೆಯೆನಿಸಿದ ವಿರೂಪಾಕ್ಷನ ದೇಗುಲ ಇಂದಿಗೂ ಬಹಳ ಗಾಂಭೀರ್ಯದಿಂದ ತಲೆಯೆತ್ತಿ ನಿಂತಿದೆ. ಎದುರಿಗೆ 11 ಅಂತಸ್ತುಗಳ ಬೃಹತ್ ಗೋಪುರವಿದೆ. ಇದಕ್ಕೆ ಬಿಷ್ಟಪ್ಪಯ್ಯನ ಗೋಪುರವೆಂದು ಹೆಸರು. ಇದರ ಎತ್ತರ 160 ಅಡಿ ಇದ್ದು ಮೇಲೇರಲಿಕ್ಕೆ ಮೆಟ್ಟಲುಗಳು ಇವೆ. ದೇಗುಲದ ಒಳಗಡೆ ಚಿತ್ರಕಲೆಗಳಿಲ್ಲದ ಒಂದು ಇಂಚು ಸ್ಥಳ ಸಹ ಬಾಕಿ ಉಳಿದಿಲ್ಲ ಇವುಗಳಲ್ಲಿ ವಿದ್ಯಾರಣ್ಯರ ಪಲ್ಲಕಿಯ ಉತ್ಸವವೊಂದು ಅತಿ ಹೃದಯಂಗಮವಾಗಿ ಚಿತ್ರಣಗೊಂಡಿದೆ. ಇನ್ನು-ವಿದ್ಯಾರಣ್ಯರು ತಪಸ್ಸು ಮಾಡಿದ ಮಂಟಪ, ಲೋಕಪಾವನ ತೀರ್ಥ ಸರೋವರ (ಮನ್ಮಥಕುಂಡ) ಭುವನೇಶ್ವರಿ, ಗುಲಗಂಜೀ ಮಾಧವ, ಚಂಡಿಕೇಶ್ವರ ದೇಗುಲ ಮುಂತಾದುವುಗಳು ಸಹ ಇಲ್ಲಿವೆ; ಮತ್ತು ಇಲ್ಲಿ ಕಾರಂಜಿ ಪದ್ಧತಿ (Drinking water system) ಆಧುನಿಕ ರೀತಿಯ ನೀರು ಸರಬರಾಜು ಕ್ರಮವನ್ನು ಸಹ ನಾಚಿಸುವಂತಹುದು! ವಿರೂಪಾಕ್ಷನಿಗೆ ಪ್ರತಿ ದಿನವೂ ದೇವತಾರ್ಚನೆ ಸಲ್ಲುತ್ತದೆ.

ವಿರೂಪಾಕ್ಷ ದೇಗುಲದ ಎದುರಿಗೆ ರಾಜಬೀದಿಯಿದೆ. ಇಕ್ಕೆಲಗಳಲ್ಲಿ ಹಾಳುಬಿದ್ದ ಅವಶೇಷಗಳನ್ನು ಧಾರಾಳವಾಗಿ ಕಾಣಬಹುದು. ಬೀದಿಯ ಕೊನೆಯ ಭಾಗದಲ್ಲಿ ಬಸವಣ್ಣನ ಗುಡಿ. ಈ ಬೀದಿಗೆ ತೇರುಬೀದಿಯೆಂದೂ ಹೇಳುತ್ತಾರೆ.

ಎದುರಿಗೆ 300 ಅಡಿ ಎತ್ತರದ ಮಾತುಂಗಬೆಟ್ಟ. ಶಿಲಾಮಯವಾದ ಇದನ್ನು ಬರಿಗಾಲಿನಿಂದಲೇ ಏರಬೇಕಲ್ಲದೆ ಪಾದರಕ್ಷೆ ಹಾಕಿಕೊಂಡು ಹೋಗಲು ಸಾಧ್ಯವಿಲ್ಲ. ಇದರ ತುದಿಯಲ್ಲಿ ಹಾಳು ಬಿದ್ದ ಮಾತುಂಗ ದೇವಾಲಯವಿದೆ. ವಿಜಯನಗರದ ಪೂರ್ಣ ವಿಹಂಗಮ ನೋಟವನ್ನು ಇಲ್ಲಿ ನಿಂತು ಮನಸಾರೆ ಸವಿಯಬಹುದು. ಎತ್ತನೋಡಿದರೂ ಶಿಲಾಮಯ ಅವಶೇಷಗಳೂ, ಅವುಗಳೆಡೆಯಲ್ಲಿ ಅಲ್ಲಲ್ಲಿ ಕಬ್ಬು ಮತ್ತು ಬಾಳೆಯ ತೋಟಗಳ ರಮ್ಯ ದೃಶ್ಯಗಳೂ ಕಣ್ಣಿಗೆ ಬೀಳುತ್ತವೆ. ಇಲ್ಲಿಂದ ಕೆಳಗಿಳಿಯಲು ಮನಸ್ಸೇ ಬರುವುದಿಲ್ಲ.

ಬೆಟ್ಟದ ಕೆಳಗಡೆ ಬಲಭಾಗದಲ್ಲಿ ಅಚ್ಯುತರಾಯನು 1539ರಲ್ಲಿ ಕಟ್ಟಿಸಿದ ಭಾರಿ ದೇವಸ್ಥಾನವೊಂದಿದೆ. ಸಮೀಪದಲ್ಲಿ ಸೂಳೆಬಜಾರ

ವಿದೆ. ನಾವು ಹೋದ ಈ ಸಂದರ್ಭದಲ್ಲಿ ಇಲ್ಲಿ ಛತ್ರದ ಪೈರನ್ನು ನಡೆ ಲಾಗಿತ್ತು.

ಇನ್ನು ನೋಡಬೇಕಾದ ಮುಖ್ಯ ದೇಗುಲವೆಂದರೆ—ವಿಜಯ ವಿಠಲ ರಾಯನ ಗುಡಿ. ಇಲ್ಲಿ ಒಂದು ಕಲ್ಲಿನಲ್ಲಿ ಸಪ್ತಸ್ವರ ಹೊರಡುವ 16 ಕಂಭ ಗಳು ಎಂಥವರನ್ನೂ ಆಚ್ಚರಿಗೊಳಿಸದಿರದು. ಮತ್ತು ■ ಪ್ರಾಕಾರದಲ್ಲಿಯ— ಕಲ್ಯಾಣಮಂಟಪ, ಕಲ್ಲು ತೇರು, ರಾಜತುಲಾಭಾರ, ಪುರಂದರದಾಸ ಮಂಟಪ ಮುಂತಾದುವುಗಳು ತಮ್ಮ ಶಿಲ್ಪಕಲಾ ಪ್ರೌಢಿಮೆಯಿಂದ ನಮ್ಮನ್ನು ಸೆರೆಹಿಡಿಯುತ್ತವೆ. ವಿಜಯ ವಿಠಲನ ಗುಡಿಯಲ್ಲಿ ದೇವತಾ ರ್ಚನೆ ನಡೆಯುವುದಿಲ್ಲ.

ಶಿಥಿಲ ಭಾಗದಲ್ಲಿ ನೋಡಬೇಕಾದ ಪ್ರಾಮುಖ್ಯ ಅವಶೇಷಗಳೆಂದರೆ— ರಾಣಿ ಸ್ನಾನಾಗಾರ, ನೀರು ಹರಿಯುವ ಕಲ್ಲಿನ ಕಾಲುವೆ, ಮಹಾನವಮಿ ದಿಬ್ಬ (ಕೃಷ್ಣದೇವರಾಯನು 1515ರಲ್ಲಿ ಒರಿಸ್ಸವನ್ನು ಗೆದ್ದ ವಿಜಯ ಸ್ಮಾರಕ ವಾಗಿ ಇದನ್ನು ಕಟ್ಟಲಾಗಿದೆ), ರಾಜರ ದರ್ಬಾರ್ ಭವನ (ಇಲ್ಲಿ ಲೋಹ ದಂತೆ ಧ್ವನಿಕೊಡುವ ಕಲ್ಲಿನ 2 ಆನೆಗಳ ಮೂರ್ತಿಗಳಿವೆ), $34\frac{1}{2} \times 3\frac{1}{2}$ ಅಡಿ ಗಳ ಒಂದೇ ಕಲ್ಲಿನಿಂದ ಮಾಡಿದ ಮರಿಗೆ, ರಾಮಾಯಣದ ಕೆತ್ತನೆಯ ದೃಶ್ಯಗಳಿಗೆ ಸಂಬಂಧಪಟ್ಟ ಹಜಾರ ರಾಮಸ್ವಾಮಿ ದೇವಾಲಯ, ಅಂತಃ ಪುರ ಸೌಧ, ಮಂತ್ರಾಲೋಚನೆ ಮಂದಿರ, ಜನಾನಾ ಭವನ, ಕಮಲ ಮಹಲು, ಕಾವಲು ಗೋಪುರಗಳು, ಆನೆಯ ಲಾಯಗಳು, ರಕ್ಷಕರ ವಸತಿ ಗೃಹಗಳು ಇತ್ಯಾದಿ.

ಅಲ್ಲದೆ—ಉಗ್ರನರಸಿಂಹ ಸ್ವಾಮಿಯ ಮೂರ್ತಿ, ಬಡಬಾಲಿಂಗ, ವರಾಹಗುಡಿ (ಮುಸಲ್ಮಾನರು ಇದನ್ನು ಸಂಪೂರ್ಣವಾಗಿ ನಾಶಪಡಿಸಿರು ವರು), ಚಕ್ರತೀರ್ಥ, ಕೋದಂಡ ರಾಮಸ್ವಾಮಿ ಗುಡಿ, ಬನಿಕಿಖಿಂಡಿ, ಶಿವ ರಾಮ ಅವಧೂತರ ಗುಹೆ, ಜೈನ ಮಂದಿರಗಳು—ಇವುಗಳನ್ನು ಸಹ ನೋಡುವುದಕ್ಕೆ ಮರೆಯಲಾಗದು.

ಇದೇ ರೀತಿ ತುಂಗಭದ್ರಾ ನದಿಯಿಂದಾಚೆಗಿರುವ ಆನೆಗೊಂದಿ (ವಾನರ ರಾಜ್ಯದ ರಾಜಧಾನಿಯೆನಿಸಿದ ಕಿಷ್ಕಿಂಧೆಯೆಂದು ಪ್ರಸಿದ್ಧಿಯಿದೆ), ಪಂಪಾ ಸರೋವರ, ಗವಿ ರಂಗನಾಥ, ಮಾಲ್ಯವಂತ ಬೆಟ್ಟದ ರಘುನಾಥ ದೇಗುಲಗಳು, ಪಟ್ಟಾಭಿರಾಮನ ಗುಡಿ, ಗಾಣಗಿತ್ತಿ ಗುಡಿ, ಋಷ್ಯಶೃಂಗ ಬೆಟ್ಟ—ಮುಂತಾದುವುಗಳು ಕೂಡ ನಮ್ಮನ್ನು ಮುಗ್ಧಗೊಳಿಸುತ್ತವೆ.

[2ನೇ ಪುಟದಿಂದ ಮುಂದುವರಿದುದು]

೩೩. ದರ್ಶನದ ಕಥೆಗಳು ಶ್ರೀ। ಬಿ. ಶಂಕರ ಭಟ್ಟ ಮತ್ತು ಶ್ರೀ। ಬಿ. ಎಂ. ಶರ್ಮಾ.
೩೪. ಅಳುವಿನ ಹೊಳೆ ಮತ್ತು ಕೇಶವಭೂಪ [ಮಕ್ಕಳ ಕಥೆಗಳು] "ನವಗಿರಿನಂದ."
೩೫. ಶರಾಬಿನ ಶಿಪಾಯಿಗಳು ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೩೬. ಗುಮಾನಿಕವಿಯ ಉಪದೇಶ ಶತಕ ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೩೭. ನಿಮಗೆ ಗೊತ್ತಿದೆಯೇ? (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೩೮. ಚತುರ ಚಮತ್ಕಾರ ಡಾ। ಎಸ್. ಪಿ. ಭಟ್.
೩೯. ಸತೀ ಸಾವಿತ್ರಿ [ಏಕಾಂಕ ನಾಟಕ] ಶ್ರೀ। ಪಿ. ವೆಂಕಟರಮಣ ಭಟ್ಟ.
೪೦. ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು. ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೪೧. ಭಾರತದ ಮಂತ್ರಿಮಂಡಲಗಳು. (ತೃತೀಯ ಮುದ್ರಣ.)
೪೨. ಕಾಲುಬಳೆಯ ಕತೆ ಶ್ರೀಮತಿ ಬಿ. ಎಸ್. ರತ್ನಮ್ಮ.
೪೩. ಭಾರತದ ನಾಲ್ಕು ಕಲಶಗಳು (ದ್ವಿ. ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು ಶ್ರೀ। ಎಲ್. ಎಸ್. ನಾಯಕ.
೪೫. ಸುಭಾಷಿತ (ನೀತಿವಚನಗಳು) [ದ್ವಿ. ಮು.] ಶ್ರೀ। ಎಂ. ಸುಬ್ರಾಯನ್, ವಿದ್ವಾನ್.
೪೬. ೧೮೫೭ರ "ಸಿಪಾಯಿದಂಗೆ" ಶ್ರೀ। ಸುಭಾಷ್ಚಂದ್ರ ಶೆಣೈ, ಬದಿಯಡ್ಕ.
೪೭. ಅಕಾಂಡತಾಂಡವ (ರೇಡಿಯೋ ನಾಟಕ) ಶ್ರೀ। ಬಿ. ದಾಮೋದರ ಬಾಳಿಗ, ಬಿ.ಎ.
೪೮. ಸಾಹಸದ ಕಥೆಗಳು ಶ್ರೀ। ಕುಡ್ಪಿ ವಾಸುದೇವ ಶೆಣೈ.
೪೯. ಸಂಜ್ಞಾ ಜ್ಞಾನಕೋಶ (ಪ್ರಥಮ ಭಾಗ) ಡಾ। ಎಸ್. ಪಿ. ಭಟ್.
೫೦. ಪಂಡಿತನ ಪಿಟೀಲು ಶ್ರೀ। ಕುಡ್ಪಿ ವಾಸುದೇವ ಶೆಣೈ.
೫೧. ಭೋಗಯಾತ್ರೆ (ಆಚಾರ್ಯ ವಿನೋಬಾಭಾವೆ) ಶ್ರೀ। ಎಲ್. ಎಸ್. ನಾಯಕ.
೫೨. ಸಂಗ್ರಾಮಸಿಂಹ (ಐತಿಹಾಸಿಕ ಕಥನ) ಶ್ರೀ। ಅ. ಗೌ. ಕಿನ್ನಿಗೋಳಿ ವಿದ್ವಾನ್.
೫೩. ಧರ್ಮ ಶಿಕ್ಷಾ ಶ್ರೀ। ಕೋ. ಶ. ಕಾರಂತ, ಬಿ. ಎ., ಬಿ. ಎಲ್., ಎಡ್ವೊಕೇಟ್.
೫೪. ಮಹಾತ್ಮ (ಪೂಜ್ಯ ಬಾಪೂಜಿ) ಶ್ರೀ। ಎಲ್. ಎಸ್. ನಾಯಕ್.
೫೫. ಮೀರಾಬಾಯಿ (ಏಕಾಂಕ ನಾಟಕ) ಶ್ರೀ। ಸಂ. ಜ. ರಾವ್.
೫೬. ವೀರರಮಣಿ ಕರ್ಮದೇವಿ ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.
೫೭. ಅರಳಿದ ನಗು ಶ್ರೀ। ಬಳ್ಕೂರು ಸುಬ್ರಾಯ ಅಡಿಗ, ವಿದ್ವಾನ್.
೫೮. ಸಚಿತ್ರ ಜಪಾನ್ ಶ್ರೀ। ಟಿ. ರಮೇಶ ಪೈ.
೫೯. ಚುಟ್ಟಬಿಟ್ಟದಿಟ್ಟ (ಏಕಾಂಕ ಪ್ರಹಸನ) ಡಾ। ಎಸ್. ಪಿ. ಭಟ್.
೬೦. ನಿರಪರಾಧಿ ಶ್ರೀ। ಎಲ್. ಎಸ್. ನಾಯಕ್.
೬೧. ಭಕ್ತವಾಣಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ.
೬೨. ಜಾನಪದ ಸಾಹಿತ್ಯ ಶ್ರೀ। ಪಡಾರು ಮಹಾಬಲೇಶ್ವರ ಭಟ್.
೬೩. ಡಾಕ್ಟರ್ ಆರೋಗ್ಯಮ್ ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೬೪. ಲೌಕಿಕ ನ್ಯಾಯಗಳು ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ.
೬೫. ‡ಶಿಶುಪಾಲ ಮಾನಭಂಗ ಶ್ರೀ। ಕೆ. ಸುಭಾಷಚಂದ್ರ ಶೆಣೈ, ಬದಿಯಡ್ಕ.
೬೬. ಜರಾಸಂಧ ವಧೆ (ಏಕಾಂಕ) ಶ್ರೀ। ಎ. ವಿ. ಮಯ್ಯ, ಬಂಟ್ವಾಳ.

೬೭.	ಪ್ರಧಾನಾಮಾತ್ಯ ಪಂಡಿತ ಜವಾಹರಲಾಲ ನೆಹರು	ಶ್ರೀ। ಕುಡ್ಪಿ ವಾಸುದೇವ ಶೆಣೈ.
೬೮.	ಕರುಣೆ ಮತ್ತು ಇತರ ಕಥೆಗಳು	ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೬೯.	ಶ್ರೀಕ್ಷೇತ್ರ ಉಡುಪಿ [ದ್ವಿ.ಮು.]	ಶ್ರೀ। ಕೆ. ಪ್ರಭಾಕರ ರಾವ್.
೭೦.	ವಿನೋದ ವಿಹಾರ	—(ಆರಿಸಿ ತೆಗೆದ ನಗೆಹನಿಗಳು)
೭೧.	ಭಾರತದ ಗತವೈಭವ	ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೭೨.	ಸತ್ಯ ಹರಿಶ್ಚಂದ್ರ (ದ್ವಿತೀಯ ಮುದ್ರಣ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೭೩.	ಸೂಕ್ತಿಗಳು	ಶ್ರೀ। ಕೆ. ವೆಂಕಟರಾಯಾಚಾರ್ಯ.
೭೪.	ಯಕ್ಷಗಾನ ಕಲಾವಿದರು (ನಟರ ಪರಿಚಯ)	ಶ್ರೀ। ವಿಘ್ನೇಶ್ವರ ಶರ್ಮಾ ತದ್ದಲಸೆ.
೭೫.	ದೇವರ ಸಾಮ್ರಾಜ್ಯದಲ್ಲಿ ಮತ್ತು ಇತರ ಕಥೆಗಳು	ಶ್ರೀ। ಎಸ್. ಎನ್. ನವಕಾನ.
೭೬.	ಕ್ರಾಂತಿಕಂಠೀರವ ಭಗತ್ ಸಿಂಘ	ಶ್ರೀ। ಸತ್ಯಾಶ್ರಯ ಕಾಮತ್.
೭೭.	ಜಾತಕಪಠನ ಮತ್ತು ಇತರ ಕಥೆಗಳು	ಶ್ರೀ। ಕುಡ್ಪಿ ವಾಸುದೇವ ಶೆಣೈ.
೭೮.	ಅಮೃತವಾಣಿ (ಲೋಕನಾಯಕರ ವಚನಗಳು)	ಶ್ರೀ। ಎಮ್. ಶ್ರೀಧರ ಕಿಣಿ.
೭೯.	ಮಾಯಾಮೃಗ (ಏಕಾಂಕ ನಾಟಕ)	ಶ್ರೀ। ಎ. ವಿ. ಮಯ್ಯ.
೮೦.	ಡಾಕ್ಟರ್ ಗಾಂಧೀಜಿ	ಶ್ರೀ। ಮರಕ್ಕಿಣಿ ಶಂಕರನಾರಾಯಣ ಭಟ್.
೮೧.	ಶ್ರೀಶಂಕರಾಚಾರ್ಯರ ಜೀವನಚರಿತ್ರೆ(ತೃ. ಮು.)	ಡಾ। ಪಿ.ಎಸ್.ವಾಸುದೇವ ಶರ್ಮ.
೮೨.	” ವಿರಚಿತ ಸ್ತೋತ್ರಗಳು ”	” ”
೮೩.	ಬೆಡಗಿನ ನಾಡು—ಕೊಡಗು:	ಶ್ರೀ। ಶ್ರೀಪತಿರಾವ್ ಫಲಿಮಾರ್ಕರ್, ಬಿ.ಎ,ಬಿ.ಟಿ.
೮೪.	ಆನೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು.	ಶ್ರೀ। ಎಲ್. ಎಸ್. ನಾಯಕ್.
೮೫.	ಮಂಗಳೂರಿಂದ ಮಧುರೆಗೆ	ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೮೬.	ಸತೀ ವೃಂದಾ (ಏಕಾಂಕ ನಾಟಕ)	ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.
೮೭.	ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ (ಎರಡು ಏಕಾಂಕಗಳು)	
೮೮.	ಗೃಹವೈದ್ಯ	ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೮೯.	ನಮ್ಮ ನಾಟಕಗಳು	ಶ್ರೀ। ಎಂ. ಎಸ್. ಆಚಾರ್.
೯೦.	ಜಾನಪದ ಕಥೆಗಳು	ಶ್ರೀ। ಕೆ. ವೆಂಕಟರಾಯಾಚಾರ್ಯ.
೯೧.	ಕೆಲವು ಉಪಯುಕ್ತ ಸಲಹೆಗಳು	ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೯೨.	ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ	ಶ್ರೀ। ಕೆ.ಎಲ್.ಎನ್. ಉಪಾಧ್ಯಾಯ.
೯೩.	ಹೋಮಿಯೋಪಥಿ ಚಿಕಿತ್ಸಾಸಾರ	ಶ್ರೀ। ಬೋಳೂರು ಎಸ್. ರಾವ್.
೯೪.	ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು	ಶ್ರೀ। ಮಂಜುನಾಥ ಭಾಗವತ.
೯೫.	ಪುನರುಜ್ಜೀವನ (ಏಕಾಂಕ ನಾಟಕ)	ಶ್ರೀ। ಗೋವಿಂದ ಭಟ್ಟ, ಶೇಡಿಗುಮ್ಮೆ.
೯೬.	ಪ್ರಥಮ ಚಿಕಿತ್ಸೆಯ ಕೈಪಿಡಿ	ಶ್ರೀ। ಬೋಳೂರು ಎಸ್. ರಾವ್.
೯೭.	ಹಸ್ತರೇಖಾ ವಿಜ್ಞಾನ	ಡಾ। ಕೆ. ಕೆ. ಕಲ್ಕೂರ್.
೯೮.	ಸ್ವಾತಂತ್ರ್ಯ (ಏಕಾಂಕ ನಾಟಕ)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೯೯.	ಭಾರತೀಯ ಸ್ವಾತಂತ್ರ್ಯಸಂಗ್ರಾಮ	ಶ್ರೀ। ಎಮ್. ರಘುನಂದನ ರಾವ್.
೧೦೦.	ಭಕ್ತ ಕುಚೇಲ (ಏಕಾಂಕ ಸಂಗೀತ ನಾಟಕ)	ಶ್ರೀ। ಅಂಬಾತನಯ.
೧೦೧.	ಉತ್ತರನ ಪೌರುಷ (ಯಕ್ಷಗಾನ)	ಶ್ರೀ। ಷಟ್ಟಣ್ಣ.

೧೦೨. ಕುಮಾರ (ವಿನೋದ ಕಥೆ) ಶ್ರೀ। ಕುಡ್ಪಿ ವಾಸುದೇವ ಶೆಣ್ಯೆ.
೧೦೩. ಕೇರಳ ಜ್ಯೋತಿಷ (ಪ್ರಮುಖ ಯೋಗಗಳು) ವೈದ್ಯಗುರು ಎಂ. ಆರ್. ಭಟ್.
೧೦೪. ಒಗಟುಗಳ ಗೊಂಚಲು (ಒಗಟುಗಳು ಭಾಗ ೩) ಡಾ। ಎಸ್. ಪಿ. ಭಟ್.
೧೦೫. ಊರ–ಔಷಧಿಗಳು(ದ್ವಿ. ಮುದ್ರಣ) ಶ್ರೀ। ಬೋಳೂರು ಎಸ್. ರಾವ್.
೧೦೬. ಮದ್ವೆ ಅವಾಂತರ (ಏಕಾಂಕ ಪ್ರಹಸನ) "ಅಷ್ಟಾವಕ್ರ".
೧೦೭. ಜಗತ್ತಿನ ವಿಜ್ಞಾನಿಗಳು ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೦೮. ನಮ್ಮ ದೇಶ ಶ್ರೀ। ಕುಡ್ಪಿ ವಾಸುದೇವ ಶೆಣ್ಯೆ.
೧೦೯. ಗ್ರಾಮ ಸ್ವಾತಂತ್ರ್ಯ (ಏಕಾಂಕ) ಶ್ರೀ। ಎ. ವಿ. ಮಯ್ಯ.
೧೧೦. ನಮ್ಮ ಕನ್ನಡ ನಾಡು ಶ್ರೀ। ಕುಡ್ಪಿ ವಾಸುದೇವ ಶೆಣ್ಯೆ.
೧೧೧. ಭಕ್ತ ಧ್ರುವ (ಏಕಾಂಕ ನಾಟಕ) ಶ್ರೀ। ಸುಬ್ರಾಯ, ಅನಂತಪುರ.
೧೧೨. ಕರ್ಣಾಟಕ ಕವಿಚರಿತ್ರೆ ಶ್ರೀ। ಬಿ. ಈಶ್ವರಯ್ಯ.
೧೧೩. ಬೇಡನ ಮಗಳು (ಏಕಾಂಕ ನಾಟಕ) ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೧೧೪. ಸ್ವಾಮಿ ವಿವೇಕಾನಂದ ಶ್ರೀ। ಎಂ. ಕೃಷ್ಣರಾವ್, ಬಿ.ಎ.
೧೧೫. ನಮ್ಮ ಆಹಾರ ಶ್ರೀ। ಕೆ. ಸಿ. ವೈದ್ಯರ್.
೧೧೬. ಗಾದೆಗಳೂ ಜ್ಞಾನೋಕ್ತಿಗಳೂ ಶ್ರೀಮತಿ ಬೇಬಿ ಸರೋಜಿನಿ.
೧೧೭. ಪುರಂದರದಾಸರು [ಏಕಾಂಕ ನಾಟಕ] ಶ್ರೀ। ಪದ್ಮನಾಭ ಸೋಮಯಾಜಿ.
೧೧೮. ಮನುಷ್ಯಯಜ್ಞ ಶ್ರೀ। ಬಿ. ಶಂಕರ ಭಟ್ಟ.
೧೧೯. ಹೆಮ್ಮಕ್ಕಳ ಹಾಡುಗಳು ಶ್ರೀ। ಪಡಾರು ಮಹಾಬಲೇಶ್ವರ ಭಟ್.
೧೨೦. ನಮ್ಮ ಹಬ್ಬಗಳು ಶ್ರೀ। ಶ್ಯಾಮರ್, ಪುತ್ತೂರು.
೧೨೧. ವೀರಾಗ್ರಣಿ ಕರ್ಣ (ಏಕಾಂಕ ನಾಟಕ) ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೧೨೨. ಸೂರ್ಯನೇ ನನಗೆ ಸಾಕ್ಷಿ ಮತ್ತು ಇತರ ಕಥೆಗಳು ಶ್ರೀ। ಎನ್. ಎಸ್. ನವಕಾನ.
೧೨೩. ನವ ಕೈಲಾಸ (ಯಕ್ಷಗಾನ) ಶ್ರೀ। ಮಾಳಕೋಡ ನಾರಾಯಣ.
೧೨೪. ಕುಶ–ಲವ (ಏಕಾಂಕ ಪೌರಾಣಿಕ ನಾಟಕ) ಶ್ರೀ। ಬಿ. ಈಶ್ವರಯ್ಯ.
೧೨೫. ಅಮರನಾಥ ಯಾತ್ರೆ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೬. ಸಂಜ್ಞಾ ಪ್ರಾಧ್ಯಾಪಕ ಮತ್ತು ಇತರ ಕಥೆಗಳು ಶ್ರೀ। ಎಂ. ಕೃಷ್ಣರಾವ್, ಬಿ.ಎ.
೧೨೭. ದ್ವಾರಕಾ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೮. ಭಾರತದ ಸಂಗೀತ ಜ್ಯೋತಿಗಳು ಶ್ರೀ। ಎಚ್. ಸುಂದರರಾಮರಾವ್.
೧೨೯. ಮಕ್ಕಳ ಪದ್ಯಗಳು ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್.
೧೩೦. ನಯೆ ಪೈಸೆ
೧೩೧. ತಾಯಿಗಾಗಿ ಮತ್ತು ಇತರ ಕಥೆಗಳು ಶ್ರೀ। ಬಿ. ಶಂಕರಭಟ್, ವಿದ್ವಾನ್.
೧೩೨. ಸಂತ ಮೀರಾಬಾಯಿಯ ಭಜನಾ ಗೀತಗಳು. ಶ್ರೀ। ಎಚ್. ಸುಂದರರಾಮರಾವ್.
೧೩೩. ಅಕ್ಷಯಪಾತ್ರೆ (ಏಕಾಂಕ) ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೩೪. ಉ. ಕ. ದ ಯಕ್ಷಗಾನ ಮಂಡಲಿಗಳು ಶ್ರೀ। ಮಂಜುನಾಥ ಭಾಗವತ, ಕಡತೋಕ.
೧೩೫. ಅಕ್ಬರ–ಬೀರಬಲ ವಿನೋದ (ದ್ವಿ. ಮು.) ಶ್ರೀ। ಮಾಧವ ಭಟ್, ಮಡಿಕೇರಿ.
೧೩೬. ವೈರಾಗ್ಯನಿಧಿ (ಏಕಾಂಕ) ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.

೧೩೭. ಭರತನ ಬಂಧುಪ್ರೇಮ (ಏಕಾಂಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ
೧೩೮. ದ್ವಾದಶ ಜ್ಯೋತಿರ್ಲಿಂಗಗಳು	ಶ್ರೀ। ಗುಂಡ್ಮಿ ಮಹಾಬಲ ಭಟ್ಟ.
೧೩೯. ಪರೀಕ್ಷೆ ಮತ್ತು ಇತರ ಕಥೆಗಳು	ಶ್ರೀ। ಎಂ. ಗೋಪಾಲ ಭಟ್.
೧೪೦. ಗಿಲ್ಟು ಮಾಡುವ ವಿಧಾನಗಳು	ಶ್ರೀ। ಎಂ. ಶ್ರೀನಿವಾಸರಾವ್.
೧೪೧. ಕನ್ನಡ ಗಾದೆಗಳು	ಶ್ರೀ। ಕುರಾಡಿ ಸೀತಾರಾಮ ಅಡಿಗ.
೧೪೨. ಮಹಾತ್ಮಾ ಉದಂಕ (ಏಕಾಂಕ ನಾಟಕ)	ಮಣಿಲ "ಶಿವಶಂಕರ"
೧೪೩. ಭಕ್ತ ಪ್ರಹ್ಲಾದ (ಪೌರಾಣಿಕ ಏಕಾಂಕ ನಾಟಕ)	ಶ್ರೀ। ಎ. ವಿ. ಮಯ್ಯ.
೧೪೪. ಧುನಿರಾಣಿ ಗಂಗೆ	ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.
೧೪೫. ಸರ್ವಜ್ಞ ವಚನಗಳು [ಭಾಗ ೧]	ಶ್ರೀ। ಕುಡ್ವಿ ವಾಸುದೇವ ಶೆಣೈ.
೧೪೬. ಅಭಿಮನ್ಯು ಅಥವಾ ಚಕ್ರವ್ಯೂಹ	ಶ್ರೀ। ಬಿ. ಈಶ್ವರಯ್ಯ, ಪೆರ್ಲ.
೧೪೭. ಗಾನ ಕುಸುಮ (ಮಕ್ಕಳ ಹಾಡುಗಳು)	ಶ್ರೀ। ಕೆ. ಎಸ್. ಪದ್ಮನಾಭ ಆಚಾರ್ಯ.
೧೪೮. ಚಾಣಕ್ಯ ಶತಕ—ಭಾಗ ೧	ಡಾ। ಟಿ. ಪಿ. ಭಟ್, ಮಂಗಳೂರು.
೧೪೯. ಚಾಣಕ್ಯ ಶತಕ—ಭಾಗ ೨	,, ,,
೧೫೦. ವರಕವಿ ಮುದ್ದಣ	ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೫೧. ಲೋಕಮಾನ್ಯ ಬಾಲಗಂಗಾಧರ ತಿಲಕ	ಶ್ರೀ। ಟಿ. ರಘುನಂದನರಾವ್.
೧೫೨. ಮಚ್ಚಗಳು: ಅದರ ಪರಿಣಾಮಗಳು	ವೈದ್ಯಗುರು ಎಂ. ಆರ್. ಭಟ್.
೧೫೩. ಭಾರತದ ವೀರನಾರಿಯರು (ಕತೆಗಳು)	
೧೫೪. ಮೂಕರಾಣಿ (ಕತೆ)	ಸಾಮ್ರಾಟ್ ವಿಕ್ರಮಾದಿತ್ಯನ ಒಂದು ಕಥೆ.
೧೫೫. ಅಷ್ಟಾವಕ್ರ ಮತ್ತು ನಿವೃತ್ತಿ ನಿರತ	ವೈದ್ಯಗುರು ಎಂ. ಆರ್. ಭಟ್.
೧೫೬. ನಮ್ಮ ಮೈಸೂರು ರಾಜ್ಯ	
೧೫೭. ವಿನೋದ ಗಣಿತ	ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೫೮. ವಿಷಬೀಜ (ಪೌರಾಣಿಕ ಏಕಾಂಕ)	ಶ್ರೀ। ಕೆ. ಗೋವಿಂದ ಭಟ್ಟ.
೧೫೯. ಮೈಸೂರು ರಾಜ್ಯದ ಪ್ರೇಕ್ಷಣೀಯ ಸ್ಥಳಗಳು	ಶ್ರೀ। ವೈ. ಮಹಾಲಿಂಗ ಭಟ್ಟ

ವಿಶೇಷ ಪ್ರಕಟಣೆ: ಮಕ್ಕಳ ಹಾಡುಗಳು (ದ್ವಿತೀಯ ಮುದ್ರಣ)

‡ ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ANNA PUBLICATIONS CAR STREET MANGALORE-1

Edited, Printed & Published by K. V. Shenoy
at The Prabhat Printers, Ltd., Mangalore.